**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ.**

**ಸಿಸಿ ನಂ.646/2020**

ಫಿರ್ಯಾದಿಃ ಕರ್ನಾಟಕ ಸರಕಾರ ಪರಃ ಕುರಕುಂಟಾ ಪೊಲೀಸ್

-ಃಃ ವಿರುದ್ದ ಃಃ-

ಆರೋಪಿ ಃ 1. ದಶರಥ ತಂದೆ ಕಾಶಪ್ಪ ಓಂಕಾರ
ವಃ 20 ವರ್ಷ, ಉಃ ಅಕ್ರಮ ಸೇಂದಿ ಮಾರಾಟ

2. ಮಹೇಶ ತಂದೆ ಗಾಳಣ್ಣ ಓಂಕಾರ
ವಃ 30 ವರ್ಷ, ಉಃ ಅಕ್ರಮ ಸೇಂದಿ ಮಾರಾಟ
ಎಲ್ಲರೂ ಸಾಃ ಸಂಗಾವಿ (ಟಿ) ಗ್ರಾಮ,
ತಾಃ ಸೇಡಂ, ಜಿಃ ಕಲಬುರಗಿ

----

**ದೋಷಾರೋಪಣೆ**

ನಾನು ಶ್ರೀ ಬಾಲು, ಬಿ.ಎ., ಎಲ್.ಎಲ್.ಬಿ., ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರು, ಸೇಡಂ, ನಿಮ್ಮ ಮೇಲೆ ಹೊರಿಸುವ ಆರೋಪವೇನೆಂದರೆ,

ದಿನಾಂಕ 29-04-2020ರಂದು 10.15 ಎ. ಎಮ್. ಗಂಟೆ ಸುಮಾರಿಗೆ ಕುರಕುಂಟಾ ಪೊಲೀಸ್ ಠಾಣಾ ಹದ್ದಿಯ ಪೈಕಿ ಸಂಗಾವಿ (ಟಿ ) ಗ್ರಾಮದಲ್ಲಿ ಆಪಾದಿತರು ಸಂಗಾವಿ (ಟಿ) ಗ್ರಾಮದ ಅಂಬೇಡ್ಕರ ಭವನದ ಸ್ವಲ್ಪ ದೂರದ ಪಕ್ಕದ ಖುಲ್ಲಾ ಜಾದಲ್ಲಿ ಅನಧಿಕೃತವಾಗಿ, ಯಾವುದೇ ಪರವಾನಿಗೆ ಇಲ್ಲದೆ ಅಕ್ರಮ ಕಲಬೆರಕೆ ಸೇಂದಿ ಮಾರಾಟ ಮಾಡುತ್ತಿದ್ದದ್ದು, ಚಾಸಾ.1ರವರು ಚಾಸಾ.2,3,5 ಮತ್ತು 6 ನೇದ್ದರವರನ್ನು ಕರೆದುಕೊಂಡು ಸದರಿ ಸ್ಥಳಕ್ಕೆ ಹೋಗಿ ಚಾಸಾ.2, 3 ನೇದ್ದವರ ಸಮಕ್ಷಮ ಮತ್ತು ಚಾಸಾ.5, 6 ನೇದ್ದವರ ಸಹಾಯದಿಂದ ದಾಳಿ ಮಾಡಲಾಗಿ ಆಪಾದಿತರು ಸದರಿ ಸೇಂದಿಯನ್ನು ಸ್ಥಳದಲ್ಲಿಯೇ ಬಿಟ್ಟು ಓಡಿ ಹೋಗಿರುತ್ತಾರೆ. ನಂತರ ಸದರಿ ಸೇಂದಿಯನ್ನು ಜಪ್ತಿ ಪಡಿಸಿಕೊಂಡಿದ್ದು, ಸದರಿ ಸೇಂದಿಯನ್ನು ರಸಾಯನಿಕ ಪರೀಕ್ಷೆಗೆ ಒಳಪಡಿಸಿದಾಗ ಅದು ಮಾನವ ದೇಹಕ್ಕೆ ಹಾನಿಕಾರವಾದ Ethyl alcohol, Chloral hydrate, Citric acid ಅಂಶ ಹೊಂದಿರುತ್ತದೆ ಅಂತಾ ವರದಿ ನೀಡಿದ್ದು, ಕಾರಣ ನೀವು ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32, 34 ಹಾಗೂ ಭಾ. ದಂ. ಸಂಹಿತೆ ಕಲಂ 273ರಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಕಾರಣ ಮೇಲೆ ಹೇಳಿದ ಅಪರಾಧಗಳಿಗಾಗಿ ವಿಚಾರಣೆ ಎದುರಿಸಬೇಕೆಂದು ನಿರ್ದೇಶಿಸುತ್ತಿದ್ದೇನೆ.

ಸಹಿ/-

ದಿನಾಂಕಃ 06-08-2025 ಪ್ರ.ದ.ನ್ಯಾ.ದಂ. ಸೇಡಂ.

**<u>ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ.</u>**

**<u>ಸಿಸಿ ನಂ.646/2020</u>**

ಫಿರ್ಯಾದಿಃ ಕರ್ನಾಟಕ ಸರಕಾರ ಪರಃ ಕುರಕುಂಟಾ ಅಬಕಾರಿ ಪೊಲೀಸ್

-ಃಃ ವಿರುದ್ದ ಃಃ-

ಆರೋಪಿ ನಂ.1ಃ- ದಶರಥ ತಂದೆ ಕಾಶಪ್ಪ ಓಂಕಾರ
ವಃ 20 ವರ್ಷ, ಉಃ ಅಕ್ರಮ ಸೇಂದಿ ಮಾರಾಟ
ಸಾಃ ಸಂಗಾವಿ (ಟಿ) ಗ್ರಾಮ,
ತಾಃ ಸೇಡಂ, ಜಿಃ ಕಲಬುರಗಿ ಹಾಗೂ ಇನ್ನೊಬ್ಬರು

**<u>ಆರೋಪಿತರ ಹೇಳಿಕೆ</u>**

ಪ್ರಃ-1) ಈ ಓದಿ ಹೇಳಲಾದ ದೋಷಾರೋಪಣೆಯನ್ನು ಕೇಳಿ ತಿಳಿದುಕೊಂಡಿರುವಿರಾ?

ಉಃ ಆ-1

ಆ-2

ಪ್ರಃ-2) ನಿನ್ನ ತಪ್ಪನ್ನು ಒಪ್ಪಿಕೊಳ್ಳುತ್ತಿಯೊ ಅಥವಾ ವಿಚಾರಣೆ ನಡೆಯಬೇಕಾ?

ಉಃ- ಆ-1

ಆ-2

(ದೋಷಾರೋಪಣೆಯನ್ನು ಆರೋಪಿತರಿಗೆ ಓದಿ ಹೇಳಿದ್ದು, ಅವರು ನೀಡಿದ ಹೇಳಿಕೆಯನ್ನು ಯಥಾವತ್ತಾಗಿ ದಾಖಲಿಸಿದ್ದು, ಅದು ಸಂಪೂರ್ಣ ಸತ್ಯವಾಗಿರುತ್ತದೆಂದು ಪ್ರಮಾಣೀಕರಿಸುತ್ತೇನೆ)

ಸಹಿ/-

ದಿನಾಂಕ 06-08-2025 ಪ್ರ.ದ.ನ್ಯಾ.ದಂ. ಸೇಡಂ.